# ಸುಲ್ಲಿ, ಬುಲ್ಲಿ ಮತ್ತು ಗಿಟ್‌ಹಬ್!

**■ ಶಶಿಕುಮಾರ್ ಸಿ.**

ಮಹಿಳೆಯರ ಘನತೆಗೆ ಧಕ್ಕೆಯುಂಟು ಮಾಡುತ್ತಿದ್ದ 'ಸುಲ್ಲಿ ಡೀಲ್ಸ್' ಮತ್ತು 'ಬುಲ್ಲಿ ಬಾಯಿ' ಆ್ಯಪ್‌ಗಳ ಬಗ್ಗೆ ದೇಶದೆಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಅವುಗಳ ಕಾರ್ಯಾಚರಣೆಗೆ ಕೇಂದ್ರ ಸರ್ಕಾರವು ನಿಷೇಧ ಹೇರಿದ್ದು, ಈ ಆ್ಯಪ್‌ಗಳನ್ನು ರಚಿಸಿದ ಮತ್ತು ಬಳಕೆ ಮಾಡಿದವರ ಖಾತೆಗಳನ್ನು ನಿರ್ಬಂಧಿಸಿದೆ.

ದುರ್ಬಳಕೆಗಾಗಿ ಆ್ಯಪ್‌ಗಳನ್ನು ರಚಿಸಿದ ಆರೋಪದಡಿ ಬೆಂಗಳೂರು ಸೇರಿದಂತೆ ಹಲವೆಡೆ ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್, 'ಬುಲ್ಲಿ ಬಾಯ್' ಅಪ್ಲಿಕೇಶನ್ ಬಳಕೆದಾರರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು' ಎಂದಿದ್ದಾರೆ.

'ಸುಲ್ಲಿ ಮತ್ತು ಬುಲ್ಲಿ' ಆ್ಯಪ್‌ಗಳ ಹಿಂದಿರುವ ಗಿಟ್‌ಹಬ್ (GitHub) ಪ್ಲಾಟ್‌ಫಾರ್ಮ್‌ನ ಮಾತೃಸಂಸ್ಥೆ ಮೈಕ್ರೊಸಾಫ್ಟ್ ಕಾರ್ಪೊರೇಷನ್. ಟಾಮ್ ಪ್ರೆಸ್ಟನ್ ವರ್ನೆರ್, ಕ್ರಿಸ್ ವಾನ್‌ಸ್ಟ್ರಾತ್, ಪಿ.ಜೆ. ಹೈಟ್ ಮತ್ತು ಸ್ಕಾಟ್ ಚಾಕನ್ ಎಂಬುವವರು 2007ರ ಅಕ್ಟೋಬರ್‌ನಲ್ಲಿ ಈ ಕಂಪನಿಯನ್ನು ಸ್ಥಾಪಿಸಿದರು. ಇದರ ಬೆಳವಣಿಗೆಯನ್ನು ಗಮನಿಸಿದ ಮೈಕ್ರೊಸಾಫ್ಟ್ ಕಾರ್ಪೊರೇಷನ್ 2018ರಲ್ಲಿ ಸುಮಾರು 7.5 ಶತಕೋಟಿ ಡಾಲರ್ ಹಣತೆತ್ತು ಈ ಕಂಪನಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಗಿಟ್‌ಹಬ್ ಎಂದರೆ, ಡೆವಲಪರ್‌ಗಳು 'ಗಿಟ್' ಅನ್ನು ಬಳಸಿಕೊಂಡು ತಮ್ಮ ಸೋರ್ಸ್ ಕೋಡ್‌ಗಳನ್ನು ಸಂಗ್ರಹಿಸುವ ಹಾಗೂ ನಿರ್ವಹಿಸುವ ವೆಬ್‌ಸೈಟ್ ಪ್ಲಾಟ್‌ಫಾರ್ಮ್. ಇದನ್ನು ಬಳಸಿಕೊಂಡು ವೆಬ್‌ಸೈಟ್ ಹಾಗೂ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಬಹುದು. ಗಿಟ್ ಎನ್ನುವುದು ಗಿಟ್‌ಹಬ್‌ನಿಂದ ರಚಿಸಿಕೊಂಡ ವೆಬ್‌ಸೈಟ್ ಹಾಗೂ ಆ್ಯಪ್‌ಗಳಲ್ಲಿನ ಫೈಲ್‌ಗಳಲ್ಲಿ ಬದಲಾವಣೆ ತರಲು, ಹಾಗೆ ತಂದ ಬದಲಾವಣೆಗಳನ್ನು ಪತ್ತೆಹಚ್ಚಲು ಬಳಸುವ ವ್ಯವಸ್ಥೆ. ಸಾಫ್ಟ್‌ವೇರ್‌ಗೆ ಮಾಡಿದ ಬದಲಾವಣೆಗಳನ್ನು ಸದಾಕಾಲ ಗಿಟ್ ಟ್ರ್ಯಾಕ್ ಮಾಡುತ್ತದೆ.

### ನೈತಿಕ ಹೊಣೆ ಮರೆತ ಗಿಟ್‌ಹಬ್

ಸಾಫ್ಟ್‌ವೇರ್ ಅಭಿವೃದ್ಧಿಯ ಸಮಯದಲ್ಲಿ ಸೋರ್ಸ್ ಕೋಡ್ ಅನ್ನು ಅಭಿವೃದ್ಧಿಪಡಿಸುವ ಪ್ರೋಗ್ರಾಮರ್‌ಗಳ ನಡುವೆ ಸಮನ್ವಯ ಸಾಧಿಸಲು ಗಿಟ್ ಬಳಸಿಕೊಳ್ಳಲಾಗುತ್ತದೆ. ವೇಗ, ಡೇಟಾ ಸಮಗ್ರತೆ ಮತ್ತು ವಿತರಣೆ, ಯೋಜಿತವಲ್ಲದ ಕೆಲಸದ ಮೇಲೆ ನಿಗಾವಹಿಸುವುದು ಇದರ ಕಾರ್ಯವೂ ಆಗಿದೆ. ಆದರೆ, 'ಸುಲ್ಲಿ' ಮತ್ತು 'ಬುಲ್ಲಿ' ಆ್ಯಪ್‌ಗಳನ್ನು ಮಹಿಳೆಯರ ಘನತೆಗೆ ಧಕ್ಕೆಯುಂಟು ಮಾಡಲು ಬಳಸುತ್ತಿದ್ದನ್ನು ಗುರುತಿಸಿ ತಾನಾಗಿಯೇ ನಿಷೇಧ ಹೇರಿ ನೈತಿಕ ಹೊಣೆಗಾರಿಕೆ ತೋರಬೇಕಿದ್ದ ಗಿಟ್‌ಹಬ್ ಹಾಗೆ ಮಾಡದೇ ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ ಆ ಆ್ಯಪ್‌ಗಳಿಗೆ ಕೊಕ್ಕೆ ಹಾಕಿದೆ.

ಗಿಟ್‌ಹಬ್ ಸಾಫ್ಟ್‌ವೇರ್‌ನ ಕೋಡ್‌ಗೆ ಮಾಡಿದ ಪ್ರತಿಯೊಂದು ಬದಲಾವಣೆಯನ್ನು ಗಿಟ್ ಟ್ರ್ಯಾಕ್ ಮಾಡುತ್ತದೆ. ಡೆವಲಪರ್‌ಗಳಿಗೆ ಕೋಡ್‌ನ ಭಾಗಗಳನ್ನು ನಕಲಿಸಲು ಮತ್ತು ಪ್ರತ್ಯೇಕಿಸಲು ಮತ್ತು ಅದನ್ನು ಸೋರ್ಸ್ ಕೋಡ್‌ನೊಂದಿಗೆ ಮತ್ತೆ ವಿಲೀನಗೊಳಿಸುವ ಮೊದಲು ಸುಧಾರಣೆ ತರಲು ಅಥವಾ ಸರಿಪಡಿಸಲು ಅವಕಾಶ ಮಾಡಿಕೊಡುತ್ತದೆ.

ಈ ಪ್ಲಾಟ್‌ಫಾರ್ಮ್ ಅನ್ನು ಓಪನ್ ಸೋರ್ಸ್ ಪ್ರಾಜೆಕ್ಟ್‌ಗಳನ್ನು ಹೋಸ್ಟ್ ಮಾಡಲು ಬಳಸಲಾಗುತ್ತದೆ. ತಮ್ಮ ಯೋಜನೆಗಳನ್ನು ವೆಬ್‌ಸೈಟ್ ಮೂಲಕ ಕಾರ್ಯರೂಪಕ್ಕೆ ತರಲು ಬಯಸುವವರಿಗೆ ಅನುವು ಮಾಡಿಕೊಡುವ ಇದು, ಸಾಫ್ಟ್‌ವೇರ್ ಸುಧಾರಣೆಗೆ ಸಹಾಯ ಮಾಡಲು ಗಿಟ್ ಮೂಲ ಯೋಜನೆಯೊಂದಿಗೆ ಸಂಬಂಧ ಹೊಂದಿರದ ಪ್ರೋಗ್ರಾಮರ್‌ಗಳಿಗೂ ಸಹರಿಸುತ್ತದೆ.

### ಆರೋಗ್ಯಸೇತು ಕೋಡ್!

ಗಿಟ್‌ಹಬ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಸ್ತುತ 200 ದಶಲಕ್ಷಕ್ಕಿಂತಲೂ ಹೆಚ್ಚು ಆ್ಯಪ್‌ಗಳ ಮತ್ತು ವೆಬ್‌ಸೈಟ್‌ಗಳ ಕೋಡ್‌ಗಳನ್ನು ಹೊಂದಿರುವ ದೊಡ್ಡ ಭಂಡಾರ. 73 ಮಿಲಿಯನ್‌ಗಿಂತಲೂ ಹೆಚ್ಚು ಡೆವಲಪರ್‌ಗಳು ಇದನ್ನು ಬಳಸುತ್ತಿದ್ದು, ಕೇಂದ್ರ ಸರ್ಕಾರದ ಕೋವಿಡ್19 ಟ್ರ್ಯಾಕಿಂಗ್ ಮತ್ತು ಟ್ರೇಸಿಂಗ್ ಅಪ್ಲಿಕೇಶನ್ ಆದ 'ಆರೋಗ್ಯ ಸೇತು'ವಿನ (Aarogya Setu) ಸೋರ್ಸ್ ಕೋಡ್ ಅನ್ನೂ ಇದರಲ್ಲಿ ಅಪ್‌ಲೋಡ್ ಮಾಡಲಾಗಿದೆ. ಇದನ್ನು ಡೆವಲಪರ್‌ಗಳು, ಕೋಡರ್‌ಗಳು ಮತ್ತು ಸಾಫ್ಟ್‌ವೇರ್ ಎಂಜಿನಿಯರ್‌ಗಳು ಬಳಸುತ್ತಿದ್ದಾರೆ.

### ಇಮೇಲ್ ಇದ್ದರೆ ಸಾಕು

ಗಿಟ್‌ಹಬ್ ಖಾತೆಯನ್ನು ತೆರೆಯಲು ಬಳಕೆದಾರರು ಇಮೇಲ್ ಐಡಿ ಒದಗಿಸಿದರೆ ಸಾಕು. ಸಾಮಾನ್ಯ ವ್ಯಕ್ತಿಯೂ ಉಚಿತ ಖಾತೆಯನ್ನು ತೆರೆಯಬಹುದು. ಬಳಕೆದಾರರನ್ನು ಸೈಟ್ ಪರಿಶೀಲಿಸುತ್ತದೆ. ಆದರೆ ಅವರನ್ನು ಯಾವಾಗಲೂ ಅನಾಮಧೇಯರಾಗಿಯೇ ಉಳಿಯುವಂತೆ ಆಯ್ಕೆ ಮಾಡುವ ಅವಕಾಶವೂ ಇದರಲ್ಲಿದೆ. ವಾರಂಟ್ ಇಲ್ಲದೆ ಐಪಿ ವಿಳಾಸ ಲಾಗ್‌ಗಳು ಮತ್ತು ಖಾಸಗಿ ಬಳಕೆದಾರರ ವಿಷಯದಂತಹ ಸ್ಥಳ ಟ್ರ್ಯಾಕಿಂಗ್ ಡೇಟಾವನ್ನು ಗಿಟ್‌ಹಬ್ ಯಾರೊಂದಿಗೂ ಹಂಚಿಕೊಳ್ಳದು. ■

### ಹರಾಜು ಹೇಗೆ?

'ಸಲ್ಲಿ ಡೀಲ್ಸ್, ಬುಲ್ಲಿ ಬಾಯಿ' ಆ್ಯಪ್‌ಗಳನ್ನು ಸ್ಮಾರ್ಟ್‌ಫೋನ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಂಡು ಹೆಸರು ನೋಂದಾಯಿಸಿಕೊಂಡಿರುತ್ತಾರೆ. ಹೀಗೆ ನೋಂದಣಿ ಮಾಡಿಕೊಂಡ ಬಳಕೆದಾರರ ಫೋನ್‌ನಲ್ಲಿ ಪ್ರತಿದಿನ ಬೆಳಿಗ್ಗೆ ಮಹಿಳೆಯರ ಫೋಟೊಗಳು ಹರಾಜಿಗೆ ಇರುವ ಬಗ್ಗೆ ನೋಟಿಫಿಕೇಷನ್ ಬರುತ್ತದೆ. ಅದನ್ನು ಕ್ಲಿಕ್ಕಿಸಿ ಬಳಕೆದಾರರು ಹರಾಜಿನಲ್ಲಿ ಪಾಲ್ಗೊಳ್ಳುತ್ತಾರೆ. ದಿನವೊಂದರಲ್ಲಿ ಕನಿಷ್ಠ ನೂರು ಮಹಿಳೆಯರ ಫೋಟೊಗಳನ್ನು ಹರಾಜಿಗೆ ಇಡಲಾಗುತ್ತದೆ.

ಅರೆನಗ್ನ ಮತ್ತು ಮಾದಕ ಭಂಗಿಯ ಮಹಿಳೆಯರ ಚಿತ್ರಗಳಿಗೆ ಗಣ್ಯ/ಖ್ಯಾತ ಮಹಿಳೆಯರ ಮುಖವನ್ನು ಎಡಿಟ್ ಮಾಡಿ, ಆ ಫೋಟೊಗಳನ್ನು ಹರಾಜಿಗೆ ಸಿದ್ಧಪಡಿಸಲಾಗುತ್ತದೆ. ಹರಾಜಿನಲ್ಲಿ ಹೆಚ್ಚು ಜನರಿಂದ ಆಯ್ಕೆಯಾದ ಫೋಟೊವನ್ನು, ಅಂದಿನ 'ಬುಲ್ಲಿ ಆಫ್ ದಿ ಡೇ' ಎಂದು ಆಯ್ಕೆ ಮಾಡಲಾಗುತ್ತದೆ. ಅದೇ ಚಿತ್ರವು ಆ್ಯಪ್‌ನ ಹೋಂಪೇಜ್‌ನಲ್ಲಿ ದಿನವಿಡೀ ಬಿತ್ತರಗೊಳ್ಳುತ್ತದೆ. ಕಾಮೆಂಟ್‌ಗೂ ಅವಕಾಶವಿದ್ದು, ಬಳಕೆದಾರರು ತುಚ್ಛವಾಗಿವೆ ಮತ್ತು ಮಹಿಳೆಯ ಘನತೆಗೆ ಧಕ್ಕೆ ತರುವ ರೀತಿಯಲ್ಲಿ ಕಾಮೆಂಟ್ ಮಾಡುತ್ತಾರೆ. ಚಿತ್ರ ಮತ್ತು ಕಾಮೆಂಟ್‌ಗಳ ಸ್ಕ್ರೀನ್‌ಶಾಟ್‌ಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತದೆ. ಅಲ್ಲೂ ತುಚ್ಛ ಕಾಮೆಂಟ್‌ನ ಮುಂದುವರಿಯುತ್ತದೆ. ಇಡೀ ದಿನ ಈ ಕಾರ್ಯ ಚಾಲ್ತಿಯಲ್ಲಿರುತ್ತದೆ. ಮರುದಿನ ಮತ್ತದೇ ಕಾರ್ಯ.